ಮಹಿಳೆಯರ ಸೀರೆಯ ವ್ಯಾಮೋಹ ಹೆಚ್ಚಾದಂತೆ ಸಾಕಷ್ಟು ವಿನೂತನವಾದ ರೇಷ್ಮೆ ಸೀರೆಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತವೆ. ಅವುಗಳಲ್ಲಿ ಟಸ್ಸರ್ ರೇಷ್ಮೆ ಸೀರೆಯೂ ಒಂದು. ಇದಕ್ಕೆ ಅಹಿಂಸಾ ಸೀರೆ ಎಂದೂ ಹೇಳಬಹುದು. ಕಾರಣ ರೇಷ್ಮೆ ಸೀರೆಗಳನ್ನು ತಯಾರಿಸಲು ಸಾಕಷ್ಟು ರೇಷ್ಮೆ ಹುಳುಗಳನ್ನು ಕೊಲ್ಲಲಾಗುತ್ತದೆ. ಆದರೆ ಈ ಟಸ್ಸರ್ ಸಿಲ್ಕ್ ನ್ನು ತಯಾರಿಸುವ ರೀತಿಯೇ ಭಿನ್ನ.

ಈಶಾನ್ಯ ರಾಜ್ಯಗಳಲ್ಲಿ ಈ ಸೀರೆಗೆ ಬೇಕಾಗುವ ರೇಷ್ಮೆ ಸಿಗುತ್ತದೆ. ಮಾಮೂಲಿ ರೇಷ್ಮೆಯಲ್ಲಾದರೆ ಕುದಿಯುವ ನೀರಿಗೆ ರೇಷ್ಮೆ ಹುಳುಗಳ ಸಮೇತ ಗೂಡನ್ನು ಹಾಕುತ್ತಾರೆ. ಇದರಲ್ಲಿ ರೇಷ್ಮೆಹುಳು ಗೂಡು ಕಟ್ಟಿ ಅದರಿಂದ ಹೊರ ಹೋದ ಮೇಲೆ ಆ ಗೂಡುಗಳನ್ನು ಸಂಸ್ಕರಿಸಿ ನೂಲು ತಯಾರಿಸಿ ರೇಷ್ಮೆ ಸೀರೆಗಳನ್ನು ತಯಾರಿಸಲಾಗುತ್ತದೆ. ಇದು ವನ್ಯ ರೇಷ್ಮೆ. ಈಶಾನ್ಯ ರಾಜ್ಯಗಳಲ್ಲಿ ಸಾಕಷ್ಟು ಅರಣ್ಯ ಪ್ರದೇಶವಿದ್ದು ಅಲ್ಲಿನ ಬುಡಕಟ್ಟು ಜನಾಂಗದವರು ದಟ್ಟ ಅರಣ್ಯ ಪ್ರದೇಶಗಳಲ್ಲಿ ಅಲೆದಾಡಿ ಈ ರೇಷ್ಮೆಗೂಡುಗಳನ್ನು ಸಂಗ್ರಹಿಸಿ ನಂತರ ರೇಷ್ಮೆ ದಾರಗಳನ್ನು ತಯಾರಿಸುತ್ತಾರೆ. ಅದರಿಂದ ಟಸ್ಸರ್ ಸಿಲ್ಕ್‌ನ ನೇಯ್ಗೆ ಮಾಡಲಾಗುತ್ತದೆ.

ಟಸ್ಸರ್ ಸಿಲ್ಕ್ ಸೀರೆಗಳು ರೇಷ್ಮೆ ಸೀರೆಯಷ್ಟು ನುಣುಪಾಗಿರುವುದಿಲ್ಲ ಮತ್ತು ಅವುಗಳಲ್ಲಿ ಸಾಕಷ್ಟು ವೈವಿಧ್ಯಗಳೂ ಇಲ್ಲ ಎಂದು ಮೂಗು ಮುರಿಯುತ್ತಿದ್ದ ಮಹಿಳೆಯರು ಇದೀಗ ಸಾಕಷ್ಟು ವಿನ್ಯಾಸಗಳಲ್ಲಿ ದೊರೆಯುವ ಟಸ್ಸರ್ ಸಿಲ್ಕ್ ಸೀರೆಗಳಿಗೆ ಮಾರು ಹೋಗಿದ್ದಾರೆ. ರೇಷ್ಮೆ ಸೀರೆಗಳಲ್ಲಿ ಸಿಗಲಾರದಷ್ಟು ಅದ್ಭುತ ವಿನ್ಯಾಸಗಳು ಈಗ ಟಸ್ಸರ್‌ನಲ್ಲಿ ದೊರೆಯುತ್ತಿವೆ. ಪ್ರತಿ ತಿಂಗಳು ಹೊಸ ಹೊಸ ವಿನ್ಯಾಸಗಳ ಟಸ್ಸರ್ ಸಿಲ್ಕ್ ಸೀರೆಗಳು ಮಾರುಕಟ್ಟೆಗೆ ಬರುತ್ತಿವೆ. ಇದರಿಂದ ಅವುಗಳ ಬೇಡಿಕೆಯೂ ಹೆಚ್ಚಾಗುತ್ತಿವೆ. ಒಂದು ಸಾವಿರ ರೂಪಾಯಿಯಿಂದ ಆರಂಭವಾಗುವ ಇದರ ಬೆಲೆ ಇದೀಗ ಹತ್ತು ಸಾವಿರವನ್ನು ದಾಟಿದೆ. ಈ ಸೀರೆಗಳು ರಫ್ ಆ್ಯಂಡ್ ಟಫ್ ಲುಕ್‌ನಿಂದ ಇನ್ನಷ್ಟು ಆಕರ್ಷಕವಾಗಿ ಕಾಣುತ್ತಿವೆ. ಬೆಲೆಯು ಹೆಚ್ಚಾದಂತೆ ಟಸ್ಸರ್ ಸಿಲ್ಕ್ ನುಣುಪಾಗುತ್ತಾ ಹೋಗುತ್ತದೆ. ವಿಭಿನ್ನತೆಯನ್ನು ಬಯಸುವ ಆಧುನಿಕ ಮನೋಭಾವದ ಯುವತಿಯರು ಸ್ವಲ್ಪ ರಫ್ ಆಗಿರುವ ಟಸ್ಸರ್ ಅನ್ನೇ ಇಷ್ಟಪಡುತ್ತಿದ್ದಾರೆ. ಇದರ ಇನ್ನೊಂದು ಕಾರಣ ಇದು ಸಾಮಾನ್ಯರ ಕೈಗೆಟುಕುವ ದರದಲ್ಲಿ ಲಭ್ಯವಾಗುತ್ತಿದೆ.



ಟಸ್ಸರ್ ಸಿಲ್ಕ್ ಸೀರೆಗಳ ಒಂದು ವಿಶೇಷತೆ ಎಂದರೆ ಸಂಪೂರ್ಣವಾಗಿ ಪ್ಲೇನ್ ಸೀರೆಗಳನ್ನು ನೇಯ್ಗೆ ಮಾಡಿ ರಿಚ್ ಬಾರ್ಡರ್ ಕೊಡುವುದು. ಗಾಢ ಕಪ್ಪು, ನೀಲಿ, ಹಸಿರು ಹೀಗೆ ಸಾಕಷ್ಟು ಬಣ್ಣಗಳಲ್ಲಿ ಸಿಗುವ ಟಸ್ಸರ್ ಸಿಲ್ಕ್ ಸೀರೆಗಳಿಗೆ ಗೋಲ್ಡನ್ ಬಾರ್ಡರ್ ಒಂದು ವಿಶೇಷ ಲುಕ್ ನೀಡುತ್ತದೆ. ಈ ಸೀರೆಗಳಿಗೆ ದೊಡ್ಡದಾದ ಬಾರ್ಡರ್‌ಗಳಿರುತ್ತವೆ. ಆ ಬಾರ್ಡರ್‌ಗಳಲ್ಲಿ ವಿವಿಧ ಹೂ ಬಳ್ಳಿಗಳ ಚಿತ್ತಾರ, ಎಲೆಗಳ ವಿನ್ಯಾಸ ಇಲ್ಲವೇ ಚೆಕ್ಸ್ ಬಾರ್ಡರ್ ಇವೆಲ್ಲವೂ ಸೀರೆಗೆ ಒಂದು ವಿಶೇಷ ಕಳೆ ತಂದುಕೊಡುತ್ತವೆ. ಅದನ್ನು ಧರಿಸುವವರ ಅಂದವೂ ಹೆಚ್ಚಾಗುತ್ತದೆ.

ಬಿಹಾರದ ಬಾಗಲಪುರ ಪ್ರಾಂತವು ಇಡೀ ಭಾರತದಲ್ಲಿಯೇ ಅತೀ ಹೆಚ್ಚು ಟಸ್ಸರ್ ಸಿಲ್ಕ್ ತಯಾರಿಸುವ ಮಳಿಗೆಗಳನ್ನು ಹೊಂದಿದೆ. ಇಲ್ಲಿರುವ ಹ್ಯಾಂಡ್‌ಲೂಮ್ ಮಳಿಗೆಗಳಲ್ಲಿ ತಯಾರಿಸುವ ಈ ಸೀರೆಗಳು ಬಾಗಲಪುರ ಸೀರೆಗಳೆಂದೇ ಖ್ಯಾತಿ ಪಡೆದಿವೆ. ಈ ಪ್ರಾಂತದಿಂದ ಯೂರೋಪ್, ಗಲ್ಫ್, ಪ್ಯಾರಿಸ್ ಮುಂತಾದ ದೇಶಗಳಿಗೆ ಟಸ್ಸರ್ ಸಿಲ್ಕ್ ಸೀರೆಗಳನ್ನು ರಫ್ತು ಮಾಡಲಾಗುತ್ತದೆ. ಕರಕುಶಲ ಬಟ್ಟೆಗಳನ್ನು ತಯಾರಿಸುವಾಗ ಅದರ ಆಧಾರ ಬಟ್ಟೆಗಳಂತೆ ಉಪಯೋಗಿಸಲಾಗುವ ಈ ಟಸ್ಸರ್ ಸಿಲ್ಕ್ ಬಟ್ಟೆಗಳು ಸಾಕಷ್ಟು ವೆರೈಟಿಗಳಲ್ಲಿ ಮತ್ತು ಬಣ್ಣಗಳಲ್ಲಿ ಲಭ್ಯವಾಗುತ್ತಿವೆ. ಇವುಗಳಲ್ಲಿ ಈಗೀಗ ಕಲರ್ ಬ್ಲಾಕಿಂಗ್ ಎಂಬ ವಿನೂತನವಾದ ವಿನ್ಯಾಸಗಳು ದೊರೆಯುತ್ತಿವೆ. ಬಟ್ಟೆಗಳ ಮೇಲೆ ಹ್ಯಾಂಡ್ ಬ್ಲಾಕ್ ಪ್ರಿಂಟಿಂಗ್ ಎಂಬ ಪದ್ಧತಿಯಲ್ಲಿ ವಿವಿಧ ವಿನ್ಯಾಸದ ಡಿಸೈನ್‌ಗಳನ್ನು ಪ್ರಿಂಟ್ ಮಾಡಿ ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದಾರೆ. ಈ ತರಹದ ಪ್ರಿಂಟೆಂಡ್ ಬಟ್ಟೆಗಳಿಗೂ ಈಗ ಎಲ್ಲಿಲ್ಲದ ಬೇಡಿಕೆ ಬಂದಿದೆ. ಮಹಾರಾಷ್ಟ್ರದ ವಿದರ್ಭ ಪ್ರಾಂತ, ಜಾರ್ಖಂಡ್, ಬಿಹಾರ ಮುಂತಾದ ಪ್ರಾಂತಗಳಲ್ಲಿ ಈ ಟಸ್ಸರ್ ಸಿಲ್ಕ್ ರಫ್ತು ಮಾಡಿ ಕೋಟಿಗಟ್ಟಲೆ ವ್ಯವಹಾರ ನಡೆಸಲಾಗುತ್ತಿದೆ. ■

## ಕೆಲವು ಟಿಪ್ಸ್

- ಟಸ್ಸರ್ ಸಿಲ್ಕ್ ಸೀರೆಗಳು ರಿಚ್ ಲುಕ್ ನೀಡುವುದರಿಂದ ಇದರ ಜೊತೆ ಧರಿಸುವ ಬ್ಲೌಸ್ ಕೂಡ ಚೆನ್ನಾಗಿರಬೇಕು. ಆದ್ದರಿಂದ ಟಸ್ಸರ್ ಸಿಲ್ಕ್ ಸೀರೆಯ ಜೊತೆ ಬಾರ್ಡರ್‌ಗೆ ಮ್ಯಾಚ್ ಆಗುವ ಗೋಲ್ಡನ್ ಬ್ಲೌಸ್ ಧರಿಸುವುದು ಒಳ್ಳೆಯದು. ಇದು ಕೂಡ ನವೀನ ವಿನ್ಯಾಸದಲ್ಲಿ ಹೊಲಿಸಿರಬೇಕು.
- ಟಸ್ಸರ್ ಸಿಲ್ಕ್ ಸೀರೆಗಳ ಬಾರ್ಡರ್ ದೊಡ್ಡದಾಗಿದ್ದರೂ ಸೆರಗು ಮಾತ್ರ ಸಿಂಪಲ್ ಆಗಿರುತ್ತದೆ. ಆದ್ದರಿಂದ ಬಾರ್ಡರ್ ರಿಚ್ ಆಗಿರುವ ಕಾರಣ ಸಿಂಗಲ್ ಪಿನ್ ಮಾಡಿ ಬಾರ್ಡರ್ ಎದ್ದು ಕಾಣುವಂತೆ ಸೀರೆಯನ್ನು ಧರಿಸುವುದು ಒಳ್ಳೆಯದು.
- ಸಾಮಾನ್ಯವಾಗಿ ರೇಷ್ಮೆ ಸೀರೆ ಉಟ್ಟಾಗ ಧರಿಸುವಂತೆ ಬಂಗಾರದ ಆಭರಣಗಳನ್ನು ಧರಿಸುವ ಬದಲು ಈ ಸೀರೆಗಳಿಗೆ ಮ್ಯಾಚ್ ಆಗುವ ಮುತ್ತಿನ ಅಥವಾ ಹರಳಿನ ಆಭರಣಗಳನ್ನು ಧರಿಸುವುದರಿಂದ ಇದರ ಅಂದ ಇನ್ನೂ ಹೆಚ್ಚಾಗುತ್ತದೆ.
- ಟಸ್ಸರ್ ಸಿಲ್ಕ್ ಸೀರೆಗಳಲ್ಲಿ ಸಾಕಷ್ಟು ವೆರೈಟಿಗಳಿವೆ. ಇವುಗಳಲ್ಲಿ ಗ್ರ್ಯಾಂಡ್ ಲುಕ್ ನೀಡುವ ಸೀರೆಗಳನ್ನು ಸಾಂಪ್ರದಾಯಿಕವಾಗಿ ಮದುವೆ ಸಮಾರಂಭಗಳಿಗೆ, ಶುಭ ಸಮಾರಂಭಗಳಿಗೆ , ಪಾರ್ಟಿಗಳಲ್ಲಿ ಧರಿಸಬಹುದಾಗಿದೆ. ಇವುಗಳಲ್ಲಿ ಸಿಂಪಲ್ಲಾಗಿರುವ ಸೀರೆಗಳನ್ನು ಆಫೀಸಿಗೆ ಅಥವಾ ಕಾಲೇಜುಗಳಿಗೆ ಧರಿಸಿದರೆ ತುಂಬಾ ಚೆನ್ನಾಗಿ ಕಾಣುತ್ತದೆ.